(b) whether it is a fact that construction work of this tank has not been taken up so far;

(c) if so, the reasons ?

SRI D. B. CHANDRE GOWDA (Minister for Minor Irrigation).—

(a) No.
(b) Yes
(c) The Plans and Estimates are under Scrutiny.

ಶ್ರೀ ಎಲ್. ಎಸ್. ದೇಸಾಯಿ.—ರಾಯಚೂರು ಜಿಲ್ಲೆ ಯಲಬುರ್ಗ ತಾಲ್ಲೂಕಿನ ೩೬ ಗ್ರಾಮಗಳು ಕೂಡ ಒಳ ಬೇಸಾಯಕ್ಕೆ ಸೇರಿರತಕ್ಕಂಥಾ ಪ್ರದೇಶವಾಗಿದೆ. ಈಗಾಗಲೇ ಅಲ್ಲಿನ ಜನರಿಗೆ ಒಂದು ಭೀಕರತೆ ಮತ್ತು ನಿರುದ್ಯೋಗ ಸಮಸ್ಯೆ ಉಂಟಾಗಿದೆ. ಈ ಬಗ್ಗೆ ಈಗಾಗಲೇ ಅಲ್ಲಿನ ಜಿಲ್ಲಾ ಮಟ್ಟದ ಅಧಿಕಾರಿಗಳಿಗೂ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೂ ಸಹ ತಿಳಿಸಲಾಗಿದೆ. ಆದುದರಿಂದ ಈ ವರ್ಷದಲ್ಲಾದರೂ ಕೂಡ ಇದರ ಬಗ್ಗೆ ಕೆಲಸಗಳನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳಿದರೆ ಆದಕ್ಕೆ ಇಲ್ಲ ಎಂದು ನನ್ನ ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಹೇಳಿದ್ದೀರಿ. ಈ ಪ್ರಶ್ನೆ ಬಹಳ ನಿರಾಶಾದಾಯಕ ವಾದಂಥಾ ಪ್ರಶ್ನೆ ಎಂದು ಭಾವಿಸಬೇಡಿ. ಈ ವರ್ಷದ ಬಜೆಟ್ಟಿನಲ್ಲಿ ಕನಿಷ್ಠಪಕ್ಷ ೮೭ ಗ್ರಾಮಗಳನ್ನಾದರೂ ಸೇರಿಸಿ ಅಲ್ಲಿಯ ಜನರಿಗೆ ಅನುಕೂಲ ಮಾಡಿಕೊಡಿ ಎಂದು ಕೇಳುತ್ತೇನೆ. ಆ ಗ್ರಾಮಗಳು ಒಣ ಬೇಸಾಯವಾಗಿರತಕ್ಕಂಥಾ ಪ್ರದೇಶವಾಗಿದೆ ಮತ್ತು ಕೆಂಪು ಮಣ್ಣು ಇರತಕ್ಕಂಥಾ ಪ್ರದೇಶವಾಗಿದೆ. ಈ ಒಂದು ದುಃಸ್ಥಿತಿಯಲ್ಲಿ ಆ ಗ್ರಾಮಗಳು ಇರುವುದರಿಂದ ಅಲ್ಲಿಗೆ ಒಂದು ಕೆರೆಯನ್ನು ಮಂಜೂರು ಮಾಡಿಕೊಟ್ಟು ಅಲ್ಲಿನ ನಿರುದ್ಯೋಗ ಒಕ್ಕಲಿಗನಿಗೆ ಅನುಕೂಲವಾಗುವಂತೆ ಈ ಕೆಲಸವನ್ನು ಮಾಡಿ ಕೊಡಬೇಕೆಂದು ನಾನು ಕೇಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ನಾನು ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿರುವುದನ್ನು ತಾವು ತಪ್ಪು ಅರ್ಥ ಮಾಡಿಕೊಂಡಿದ್ದೀರಿ. ಅದು ಬಜೆಟ್ ಕೆಲಸ ಆದಕ್ಕೆ ೧೦ ಲಕ್ಷ ೩೪ ಸಾವಿರ ರೂಪಾಯಿ ಅಂದಾಜು ಮಾಡಿದ್ದೇವೆ ಮತ್ತು ಆ ಬಗ್ಗೆ ಪ್ಲಾನ್ಸ್ ಕೂಡ ತಯಾರಾಗಿವೆ. ಅಲ್ಲಿಂದ ತಾಂತ್ರಿಕ ನಕ್ಷೆ ಮತ್ತು ಎಸ್ಟಿಮೇಟ್ ಬರಲು ತಡವಾಗಿದ್ದುದರಿಂದ ಆ ಕೆಲಸ ಆರ್ಥಕ್ಕೆ ಆಗಿತ್ತು. ಅಲ್ಲಿಂದ ಒಂದು ಪರಿಸ್ಥಿತಿಯನ್ನು ಮನಗಂಡೇ ಇದನ್ನು ಈ ಬಜೆಟೆಡ್ ವರ್ಕ್ಸ್‌ನಲ್ಲಿ ಸೇರಿಸಲಾಗಿದೆ.

Vented dam across Erpakariya River in Karkal Taluk.

330 SRI DAMODAR MULKY, (Moodabidri).—Will the Minister for Minor Irrigation be pleased to state;—

(a) when was a vented dam constructed across Erpakariya river at Mukkadappa of Kadandale village Karkal Taluk, South Kanara District;

(b) when a portion of the dam was washed away;

(c) what was the cost of the dam;

(d) what is the total acreage of land this dam was supplying water;

(e) whether the water cess is being levied ?

SRI D. B. CHANDREGOWDA (Minister for Minor Irrigation)—

(a) The Official nomenclature of this vented dam is "Vented dam across Kalmadi and Kuradi river" (Kallamundkur river) in Kadandale village in Karkal Taluk.

This vented dam was constructed in 1967.

(*b*) 1968.

(*c*) Rs. 16/773-00.

(*d*) The contemplated atchkat is 39 acres.

(*e*) No.

ಶ್ರೀ ದಾಮೋದರ ಮುಲ್ಕಿ.—ಸ್ವಾಮಿ, ಈ ಒಂದು ತೆರಪು ಅಣೆಕಟ್ಟಿಯನ್ನು ೧೯೬೭ರಲ್ಲಿ ನಿರ್ಮಿಸಲಾಗಿದೆ ಎಂದು ಹೇಳಿದ್ದೀರಿ ಮತ್ತು ಇದರಲ್ಲಿ ಒಂದು ಭಾಗವು ೧೯೬೮ರಲ್ಲಿ ಬಿದ್ದುಹೋಗಿದೆ ಎನ್ನುವುದನ್ನೂ ಸಹ ತಿಳಿಸಿದ್ದೀರಿ. ಕೇವಲ ೬ ತಿಂಗಳಿನಲ್ಲಿ ಇದರಲ್ಲಿ ಒಂದು ಭಾಗ ಕೊಚ್ಚಿಹೋಗಿರುವುದಕ್ಕೆ ಕಾರಣ ಏನು ಎನ್ನುವುದನ್ನು ತಿಳಿಸುತ್ತೀರಾ ? ಮತ್ತು ಈ ಬಗ್ಗೆ ತನಿಖೆ ಮಾಡುವುದಕ್ಕೇನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

† ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಸದಸ್ಯರು ಹೇಳಿದ ಹಾಗೆ ಇದು ೧೯೬೮ರಲ್ಲಿ ಕೊಚ್ಚಿಹೋಗಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಆದನ್ನು ತನಿಖೆ ಮಾಡಿಸುವ ಅಗತ್ಯ ಇಲ್ಲ ಎಂದು ಗೊತ್ತಾಗಿರುವುದರಿಂದ ಅದರ ಬಗ್ಗೆ ತನಿಖೆ ಮಾಡಿಸಿಲ್ಲಾ, ಅಗತ್ಯ ಬಿದ್ದರೆ ತನಿಖೆ ಮಾಡಿಸುತ್ತೇನೆ.

ಶ್ರೀ ದಾಮೋದರ ಮುಲ್ಕಿ.—ಇದನ್ನು ತನಿಖೆ ಮಾಡಿಸುವ ಅಗತ್ಯ ಇಲ್ಲ ಎಂದು ಗೊತ್ತಾದ ಮೇಲೆ, ಆ ಬಗ್ಗೆ ಸರಿಪಡಿಸುವುದಕ್ಕೆ ಇದುವರೆಗೂ ಕೂಡ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲಾ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಒಂದು ತೆರಪು ಅಣೆಕಟ್ಟೆಯ ಒಂದು ಭಾಗ ಕೊಚ್ಚಿ ಹೋದ ಮೇಲೆ ಅದನ್ನು ಸರಿಪಡಿಸಲು ಸಾರ್ವಜನಿಕರಿಂದಾಗಲಿ ಅಥವಾ ಅವಕ್ಕೆ ಸಂಬಂಧಪಟ್ಟವರಿಂದವೇರಾಗಲಿ ಯಾವ ಒತ್ತಡವೂ ಬರದೇ ಇದ್ದ ಕಾರಣ ಅದು ಹಾಗೆಯೇ ಉಳಿಯಿತು: ಈಗ ಅದು ಗಮನಕ್ಕೆ ಬಂದಮೇಲೆ ಈಗ ಅದಕ್ಕೆ ಖರ್ಚು ಮಾಡಲು ೧೦ ಸಾವಿರ ರೂಪಾಯಿನ ಒಂದು ಅಂದಾಜು ಮಾಡಿದೆ. ಆ ಕೆಲಸವನ್ನು ತ್ವರಿತವಾಗಿ ಮಾಡಿಸುತ್ತೇವೆ.

ಶ್ರೀ ದಾಮೋದರ ಮುಲ್ಕಿ.—ಸ್ವಾಮಿ, ನಮ್ಮ ಜಿಲ್ಲೆಯಲ್ಲಿ ದೊಡ್ಡ ನೀರಾವರಿ ಯೋಜನೆಯಾಗಲಿ ಅಥವಾ ಮಧ್ಯಮ ನೀರಾವರಿ ಯೋಜನೆಯಾಗಲಿ ಇಲ್ಲ. ಆಲ್ಲಿ ಇರುವುದು ಬರೀ ಸಣ್ಣ ನೀರಾವರಿ ಯೋಜನೆ ಮಾತ್ರ. ಇವನ್ನು ಗಮನದಲ್ಲಿಟ್ಟುಕೊಂಡು ಯಾವುದರಲ್ಲಿ ಹೆಚ್ಚು ನೀರು ಬರುತ್ತದೋ ಅದರ ಬಗ್ಗೆ ಒಂದು ಅಂದಾಜು ಮಾಡಿ ಮತ್ತು ಯಾವುದು ದುರಸ್ತಿಯಲ್ಲಿರುತ್ತದೊ ಅದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ನಡೆಸಿ ಅದರ ಬಗ್ಗೆ ಏನಾದರೂ ಒಂದು ಕಾರ್ಯಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಮೊದಲೇ ಹೇಳಿದಂತೆ ಮಾನ್ಯ ಸದಸ್ಯರು ಮಲೆನಾಡಿನ ಭಾಗವಲ್ಲಿರತಕ್ಕಂಥಾ ಅಂಶಗಳನ್ನು ಏನು ತಿಳಿಸಿದರೋ ಅದನ್ನು ನಾನು ತೀವ್ರವಾಗಿ ಗಮನಿಸಿದ್ದೇನೆ. ಮತ್ತು ಇದು ಒಂದು ವಿಶೇಷವಾದ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿರುತ್ತದೆ. ನಾನು ಮೊದಲೇ ಹೇಳಿದ ಹಾಗೆ ಈ ಒಂದು ತೆರಪು ಅಣೆಕಟ್ಟೆಯ ಒಂದು ಭಾಗವು ಯಾವಾಗ ಕೊಚ್ಚಿ ಹೋಯಿತು ಆವಾಗ ಸಾರ್ವಜನಿಕರಿಂದಾಗಲಿ ಅಥವಾ ಸಂಬಂಧಪಟ್ಟವರಿಂದಲಾಗಲಿ ಯಾವುದೇ ರೀತಿಯ ಒತ್ತಾಯ ಬರದೇ ಇದ್ದುದರಿಂದ ಅದು ಹಾಗೆಯೇ ಉಳಿದುಕೊಂಡಿದೆ. ಈಗ ಆ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಆ ಬಗ್ಗೆ ತಕ್ಷಣ ಕಾರ್ಯಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಾಮಿ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕಂಥಾ ವೆಂಟೆಡ್ ಡ್ಯಾಮ್‌ನಲ್ಲಿ ಸುಮಾರು ೯೦ ಪಾಲಿನಷ್ಟು ನೀರು ನಿರುಪಯುಕ್ತವಾಗುತ್ತದೆ ಮೊದಲು ಈ ಡ್ಯಾಮ್‌ನ್ನು ಕಟ್ಟುವ ಮೊದಲು ಅದರಲ್ಲಿರುವ ನೀರು ಸಾಕಷ್ಟು ಅಚ್ಚುಕಟ್ಟಿಗೆ ಪ್ರಯೋಜನವಾಗುತ್ತಿತ್ತು ಈಗ ಈ ವೆಂಟೆಡ್ ಡ್ಯಾಮ್ ಕಟ್ಟಿದ ಮೇಲೆ ಬಹಳಷ್ಟು ನೀರು ಸೀವೇಜ್ ಆಗಿ ಹೋಗಿಬಿಟ್ಟು ಬೇಕಾದಷ್ಟು ನಷ್ಟವಾಗುತ್ತಾ ಇದೆ. ಕಾರಣ ಈ ಕಂಟ್ರಾಕ್ಟರ್ಸ್ ಈ ಬಗ್ಗೆ ಏನು ಕೆಲಸ ತೆಗೆದುಕೊಳ್ಳುತ್ತಾರೋ ಅವರು ಈ ರೀತಿಯಾಗಿ ಸರಿಯಾಗಿ ಕೆಲಸ ಮಾಡದೇ ಇದ್ದುದರಿಂದ ಅವರಿಗೆ ಕೊಟ್ಟಿರತಕ್ಕಂಥಾ ದುಡ್ಡು ಈ ರೀತಿಯಾಗಿ ದಾನವಾಗಿ ಹಣ ಕೊಟ್ಟಂತಾಗಿದೆ. ಈ ಬಗ್ಗೆ ನಮ್ಮ ಜಿಲ್ಲೆಯ ಶಾಸಕರಿಂದಲೂ

ಮತ್ತು ಪಬ್ಲಿಕ್‌ನಿಂದಲೂ ಸಹ ಸಾಕಷ್ಟು ಕಂಪ್ಲೈಂಟ್ ಕೊಟ್ಟಿದ್ದೇವೆ. ಆದರೆ ಇದರ ಬಗ್ಗೆ ಏನೂ ಕಂಪ್ಲೈಂಟ್ ಕೊಟ್ಟಿಲ್ಲ ಎಂದು ಹೇಳುವುದು ಸತ್ಯಕ್ಕೆ ದೂರವಾದ ವಿಚಾರ. ಆದುದರಿಂದ ಈ ಬಗ್ಗೆ ನಾನು ಕೇಳುವುದೇನೆಂದರೆ ಈಗ ಕಟ್ಟಿರತಕ್ಕಂಥಾ ಪೇಟೆಡ್ ಡ್ಯಾಮ್‌ನಲ್ಲಿ ಏನು ತಾಂತ್ರಿಕ ದೋಷ ಇದೆ ಅದನ್ನು ಕಂಡುಹಿಡಿದು ಅದನ್ನು ಸರಿಯಾಗಿ ಕನ್‌ಸ್ಟ್ರಕ್ಟ್ ಮಾಡಲಿಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ? ಅಲ್ಲಿಯ ನೀರು ಸೀಪೇಜ್ ಆಗದೇ ಇರುವ ರೀತಿಯಲ್ಲಿ ಕೆಲಸ ತೆಗೆದುಕೊಂಡು ಮಾಡಿ ಕೊಟ್ಟರೆ ಆದರಿಂದ ಅಲ್ಲಿನ ರೈತರಿಗೆ ಬಹಳಷ್ಟು ಅನುಕೂಲವಾಗುವುದೂ ಅಲ್ಲದೆ ಅವರ ತೊಂದರೆಯೂ ಸಹ ನಿವಾರಣೆ ಯಾಗುತ್ತದೆ. ಆದುದರಿಂದ ನೀವು ಕಟ್ಟಿರತಕ್ಕಂಥಾ ಪೇಟೆಡ್ ಡ್ಯಾಮ್ ಏನು ಇದೆ ಅದು ಪ್ರಯೋಜನವಾಗುವ ರೀತಿಯಲ್ಲಿ ಕೆಲಸ ಮಾಡಿಕೊಡುತ್ತೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ.—ತೆರಪು ಆಣೆಕಟ್ಟಿಗಳನ್ನು ವಿಶೇಷವಾಗಿ ಮಲೆನಾಡಿನ ಭಾಗದಲ್ಲಿ ಮಾಡಿದ್ದಾರೆ. ಇದುವರೆಗೂ ಕೂಡ ಮಾನ್ಯ ಸದಸ್ಯರುಗಳು ಹೇಳಿದ ವಿಚಾರಗಳ ಬಗ್ಗೆ ನನ್ನ ಗಮನಕ್ಕೆ ಬಂದಿರಲಿಲ್ಲವು. ಈಗ ತಾನೆ ಮಾನ್ಯ ಸದಸ್ಯರು ಹೇಳಿದ್ದಾರೆ ಏನೆಂದರೆ ಸುಮಾರು ೮೦ ಪಾಲಿನಷ್ಟು ನೀರು ನಿರುಪಯುಕ್ತವಾಗುತ್ತಾ ಇದೆ ಎಂದು ಮತ್ತು ಅಲ್ಲಿಯ ಕೆಲಸಗಳು ಈ ಪೇಟೆಡ್ ಡ್ಯಾಮ್‌ನಲ್ಲಿ ನಡೆಯುತ್ತಾ ಇರುವ ಕೆಲಸಗಳು ಆಷ್ಟು ಸಮರ್ಪಕವಾಗಿಲ್ಲ ಎಂದು ಅವರು ಹೇಳಿರತಕ್ಕಂಥಾ ಅಂಶ ಗಳನ್ನು ಗಮನಿಸಿ ಆ ಬಗ್ಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇವೆ.

ಶ್ರೀ ದಾವೋದರ ಮೂಲ್ಕಿ.—ಹಿಂದೆ ಇದೆ ವಿಷಯದಲ್ಲಿ ನಾವು ಚರ್ಚೆಮಾಡಿದ್ದೇವೆ. ಮಾನ್ಯ ಮಂತ್ರಿಗಳು ಹೊಸಬರು. ಈ ವಿಷಯನ್ನು ನಾವು ಸರ್ಕಾರದ ಗಮನಕ್ಕೆ ತಂದಿದ್ದೇವೆ, ಮಾನ್ಯ ಸದಸ್ಯರಾದ ಮೊಯಿಲಿಯವರು ಹೇಳಿದ ಹಾಗೆ, ನಮ್ಮ ಭಾಗದಲ್ಲಿ ಕಟ್ಟಿದಂಥ ಆಣೆಕಟ್ಟಿನಲ್ಲಿ ನೀರು ಸರಿ ಯಾಗಿ ನಿಲ್ಲುವುದಿಲ್ಲ. ರೈತನು ನೀರನ್ನು ನಿಲ್ಲಿಸುವುದಕ್ಕೋಸ್ಕರ ಪಣ್ಣಿನ ಕಟ್ಟೆಯನ್ನು ಕಟ್ಟಬೇಕಾ ಗಿರುತ್ತದೆ. ಆದ್ದರಿಂದ ತಾವು ಈ ವಿಷಯದಲ್ಲಿ ಕೂಲಂಕುಷವಾಗಿ ವಿಚಾರಣೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ —ಮಂತ್ರಿಗಳು ಹೊಸಬರಾದರೂ ಖಾತೆ ಹಳೆಯದು. ಖಾತೆ ಯಲ್ಲಿರುವ ಎಲ್ಲಾ ಹಳೆಯ ಕಡತ ಹೊಸ ಮಂತ್ರಿಗಳಿಗೂ ಬರುತ್ತದೆ. ಹಳೆಯದನ್ನು ನೋಡಿಕೊಂಡು ನಾವು ಜಬಾಬು ಕೊಡುತ್ತಿರುವುದು. ಈಗ ಮಾನ್ಯ ಸದಸ್ಯರು ಯಾವ ಒಂದು ಹೊಸ ವಿಚಾರವನ್ನು ಹೇಳಿದ್ದಾರೆ ಅದನ್ನು ಖಂಡಿತವಾಗಿಯೂ ಮನಸ್ಸಿನಲ್ಲಿಟ್ಟುಕೊಂಡು ಮುಂದಿನ ಕೆಲಸ ಮಾಡಿಸುತ್ತೇನೆ.

Sagar General Hospital

349 SRI L. T. THIMMAPPA HEGDE (Sagar).—Will the Minister for Health and Family Welfare be pleased to state :—

(*a*) whether it has come to the notice of the Government that the patients of General Hospital, Sagar are put to great hardship due to severe leakage of tiled roof due to which all beds get wet ;

(*b*) if so, whether the Government intends to take steps to replace the old roofing with a new R.C.C. slope roofing ;

(*c*) whether the Government intends to take immediate steps to take up this work urgently and to stipulate the definite period of its completion as large number of patients are visiting this hospital ?